# ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,ನ್ಯಾಯಾಲಯ, ಅಂಕೋಲಾ.

ಸಿ.ಸಿ. ನಂ.11/2025

ಪಿ.ಡಬ್ಯೂಃ1

ಸಿಡಬ್ಲ್ಯೂ-1

ಸಾಕ್ಷಿದಾರರ ಹೆಸರು : ಅರುಣ ಜೊಸೆಫ್ ನಡಕಟ್ಟಿನ

ತಂದೆಯ ಹೆಸರು : ಜೊಸೆಫ್ ನಡಕಟ್ಟಿನ

ವಯಸ್ಸು : 31 ವರ್ಷ

ಉದ್ಯೋಗ : ಉಪ ವಲಯ ಅರಣ್ಯಾಧಿಕಾರಿ ,ವ ಮೊಜನಿದಾರ,ಹೆಬ್ಬುಳ ಶಾಖೆ

ವಾಸ : ಅರಣ್ಯ ವಸತಿ ಗೃಹ ಸುಂಕಸಾಳ , ಅಂಕೋಲಾ

ದಿನಾಂಕಃ 30-01-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರದ ಪರವಾಗಿ ಸ .ಸ. ಆ ರವರಿಂದ ಃ**

1. ನಾನು ಕಳೆದ 4 ವರೆ ವರ್ಷಗಳಿಂದ ಉಪವಲಯ ಅರಣ್ಯಾಧಿಕಾರಿ ವ ಮೊಜಣಿದಾರ, ಹೆಬ್ಬುಳ ಶಾಖೆ ಮಾಸ್ತಿಕಟ್ಟಾ ವಲಯದಲ್ಲಿ ಕಾರ್ಯ ನಿರ್ವಹಿಸುತ್ತಿದ್ದೇನೆ .

2. ನಾನು ಕಲಂ 200 ದಂಡ ಪ್ರಕ್ರಿಯೆ ಸಂಹಿತೆ ಹಾಗೂ ವನ್ಯ ಜೀವಿ ಸಂರಕ್ಷಣಾ ಕಾಯ್ದೆ ಯ ಕಲಂ 55 ರ ಪ್ರಕಾರ ಕರ್ನಾಟಕ ಸರಕಾರ ಅಧಿಸೂಚನೆಯಂತೆ ವನ್ಯ ಜೀವಿ ಪ್ರಕರಣದ ಪಿರ್ಯಾದೆ ಸಲ್ಲಿಸಲು ಅಧಿಕಾರ ಹೊಂದಿರುತ್ತೇಃೀನೆ .

3. ದಿಃ19-10-2023 ರಂದು ನನಗೆ ಹೆಬ್ಬುಳ ಗ್ರಾಮದಲ್ಲಿರುವಂತಹ ರಾಜೇಶ ಚಂದ್ರು ಪಡ್ತಿ ಯಾನೆ ರಾಜೇಶ ಚಂದ್ರು ಗಾಂವಕಾರ ಇತನ ಮನೆಯ ಹತ್ತಿರ ಕಾಡು ಪ್ರಾಣಿ ಕೊಂದಿದ್ದಾರೆ ಎನ್ನುವ ಬಾತ್ಮಿದಾರರಿಂದ ಬಾತ್ಮಿ ಬಂದಿದ್ದು ಸದ್ರಿ ಬಾತ್ಮಿಯ ಕುರಿತಂತೆ ನಾನು ವಲಯ ಅರಣ್ಯಾಧಿಕಾರಿ ಮಾಸ್ತಿಕಟ್ಟಾ ಚಾಸಾ -5 ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ,ಅಂಕೋಲಾ ಉಪ ವಿಭಾಗ ಚಾಸಾ - 8 ರವರಿಗೆ ತಿಳಿಸಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಗಳಿಂದ ನೀಡಿದ ಶೊಧನಾ ವಾರಂಟನ್ನು ವಲಯ ಕಚೇರಿಯಿಂದ

ಪಡೆದು ಶೋದ ಕಾರ್ಯಕ್ಕಾಗಿ ಇಲಾಖಾ ಸಿಬ್ಬಂದಿಯೊಂದಿಗೆ ಪಂಚರಿಗಾಗಿ ಹುಡುಕುತ್ತಾ ಹೆಬ್ಬುಳ ಗ್ರಾಮದ ಚಾಸಾ-3 ಮತ್ತು 4 ರವರ ಮನೆಗೆ ಹೋಗಿ ಸದ್ರಿ ಬಾತ್ಮಿ ಕುರಿತು ತಿಳಿಸಿ ಪಂಚರಾಗಿ ಸಹಕರಿಸುವಂತೆ ಕೇಳಿ ಕೊಂಡಿರುತ್ತೇನೆ . ಇದಕ್ಕೆ ಒಪ್ಪಿದ ಪಂಚರು ನಮ್ಮೊಂದಿಗೆ 1 ನೇ ಆರೋಪಿ ಮನೆಗೆ ಬಂದು ಸೇರಿರುತ್ತೇವೆ . ನಂತರ ನಾನು ಮನೆಯಲ್ಲಿದ್ದ 1 ನೇ ಆರೋಪಿಯನ್ನು ಕರೆದು ನಿಮ್ಮ ಮನೆಯ ಹತ್ತಿರ ಕಾಡು ಪ್ರಾಣಿ ಕೊಂದಿರುವುದಾಗಿ ಬಾತ್ಮಿ ಬಂದಿದ್ದು ನಿಮ್ಮ ಮನೆಯನ್ನು ಶೋಧಿಸಲು ಸಹಕರಿಸಬೇಕೆಂದು ತಿಳಿಸಿ ಶೋಧನಾ ವಾರಂಟನ್ನು ತೋರಿಸಿ 1 ನೆ ಆರೋಪಿ ಮನೆ ಮತ್ತು ತೋಟವನ್ನು ಪರಿಶಿಲಿಸಿರುತ್ತೇನೆ . 1 ನೇ ಆರೋಪಿ ಮನೆ ಲಗ್ತ ತೋಟದಲ್ಲಿ 2 ಗುಂಡಿಗಳನ್ನು ಅಗೆದು ಮುಚ್ಚಿರುವುದು ಕಂಡು ಬಂದಿರುತ್ತದೆ . ಸದ್ರಿ 2 ಗುಂಡಿಗಳನ್ನು ಅಗೆಸಿ ನೋಡಲಾಗಿ ಒಂದು ಗುಂಡಿಯಲ್ಲಿ ಕಾಡು ಹಂದಿಯ ತಲೆ ಭಾಗ ಮತ್ತು 2 ಕಾಲುಗಳು ಕಂಡು ಬಂದಿರುತ್ತದೆ . ಮತ್ತೊಂದು ಗುಂಡಿಯಲ್ಲಿ ಕಾಡು ಹಂದಿಯ ಹೊಟ್ಟೆ ಭಾಗಳು ಕಂಡು ಬಂದಿರುತ್ತದೆ . ಈ ಕುರಿತಂತೆ 1 ನೇ ಆರೋಪಿಗೆ ನಾನು ವಿಚಾರಿಸಿದಾಗ ಆಗ 1 ನೇ ಆರೋಪಿಯು ನಿನ್ನೆ ದಿವಸ ರಾತ್ರಿ ನಮ್ಮ ಮನೆಯ ನಾಯಿಗಳು ಒಂದುಕಾಡು ಹಂದಿಯನ್ನು ಅಟ್ಟಾಡಿಸಿಕೊಂಡು ನಮ್ಮ ತೋಟದ ಹತ್ತಿರ ಹಿಡಿದಿರುತ್ತದೆ . ನಂತರ ನಾನು ಮತ್ತು ನನ್ನ ಭಾವನಾದ 2 ನೇ ಆರೋಪಿಯು ಸೇರಿ ಕೊಂಡು ಆ ಕಾಡು ಹಂದಿಯನ್ನು ಕೊಂದು ಮಾಂಸ ತಯಾರಿಸಿ ತಿಂದಿರುತ್ತೇವೆ ಹಾಗೂ ಉಳಿದ ಕಾಡು ಹಂದಿಯ ತಲೆ ಭಾಗ, 2 ಕಾಲು ಹಾಗೂ ಹೊಟ್ಟೆ ಭಾಗವನ್ನು 2 ಗುಂಡಿ ತೆಗೆದು ಮುಚ್ಚಿರುತ್ತೇವೆ ಎಂದು ಒಪ್ಪಿಕೊಂಡಿರುತ್ತಾರೆ .ಮುಂದುವರಿದು ನಾವು ಸದ್ರಿಯವರ ತೋಟ ಹಾಗೂ ಮನೆಯ ಸುತ್ತಮುತ್ತಲಿನ ಜಾಗ ಪರಿಶಿಸಿಲಿಸಿ ನೋಡಲಾಗಿ ನಮಗೆ ಬೇರೆ ಏನು ಸಿಕ್ಕಿರುವುದಿಲ್ಲ . ನಂತರ ನಾನು 1 ನೆ ಆರೋಪಿಗೆ ನೀವು ಕಾಡು ಹಂದಿ ಕೊಂದಿದ್ದು ಕಾನೂನು ರೀತಿಯ ಅಪರಾಧ ಮಾಡಿದ್ದು ನಿಮ್ಮನ್ನು ದಸ್ತಗಿರಿ ಮಾಡುತ್ತೇನೆ ಎಂದು ಹೇಳಿ ದಸ್ತಗಿರಿ ಮಾಡಿರುತ್ತೇನೆ .

4. ನಂತರ ಈ ಪ್ರಕರಣದ 2 ನೆ ಆರೋಪಿಯನ್ನು ಹುಡುಕಿ ನೋಡಲಾಗಿ ಆತನು ತಲೆ ಮರೆಸಿಕೊಂಡಿರುತ್ತಾನೆ . ನಂತರ ನಾನು ವಲಯ ಕಚೇರಿಗೆ ಕರೆ ಮಾಡಿ ಮಾಸ್ತಿಕಟ್ಟಾ ವಲಯ ಅರಣ್ಯ ಮೊಕದ್ದಮೆ ಸಂಖ್ಯೆ 8/2023-24 ದಿಃ19-10-2023 ಎಂದು ಮಾಹಿತಿ ಪಡೆದು ವನ್ಯ ಜೀವಿ ಪ್ರಕರಣ

ದಾಖಲಿಸಿರುತ್ತೇನೆ . ಆರೋಪಿಯ ಕಡೆಯಿಂದ ಸಿಕ್ಕ ವಸ್ತುಗಳನ್ನು ಪಂಚರ ಸಮಕ್ಷಮ ಪಂಚನಾಮೆ ಜರುಗಿಸಿ ಪೋಟೊ ತೆಗೆದುಕೊಂಡು ಇಲಾಖಾ ತಾಬಾ ವಶಪಡಿಸಿಕೊಂಡಿರುತ್ತೇನೆ . ಸಾಕ್ಷಿ ದೂರನ್ನು ತೋರಿಸಲಾಗಿದ್ದು ಸಾಕ್ಷಿ ಅದನ್ನು ನೋಡಿ ಗುರುತಿಸಿರುವುದರಿಂದ ಅದನ್ನು ನಿಪಿ-1 ಎಂದು ಗುರುತಿಸಲಾಯಿತು . ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು .ಸಾಕ್ಷಿ ಪಂಚನಾಮೆ ತೋರಿಸಲಾಗಿದು ಸಾಕ್ಷಿ ಅದನ್ನು ನೋಡಿ ಗುರುತಿಸಿರುವುದರಿಂದ ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2 (ಎ) ಎಂದು ಗುರುತಿಸಲಾಯಿತು . ಸಾಕ್ಷಿಗೆ ಮಹಜರ ಕಾಲಕ್ಕೆ ತೆಗೆದ 2 ಪೊಟೊವನ್ನು ತೋರಿಸಲಾಗಿದ್ದು , ಸಾಕ್ಷಿಯು 2 ಪೊಟೊಗಳನ್ನು ನೋಡಿ ಗುರುತಿಸಿರುವುದರಿಂದ ಅವುಗಳನ್ನು ನಿಪಿ-3 ಮತ್ತು 4 ಹಾಗೂ ಸಿಡಿಯನ್ನು ನಿಪಿ-5 ಎಂದು ಗುರುತಿಸಲಾಯಿತು . ಸಾಕ್ಷಿಯು ನಿಪಿ-3 ರ ಪೊಟೊದಲ್ಲಿರುವ ಕಾಡು ಹಂದಿಯ ತಲೆ , ಕಾಲು , ಮತ್ತು ಹೊಟ್ಟೆಯ ಭಾಗ ನೋಡಿ ಗುರುತಿಸಿರುತ್ತಾರೆ . ನ್ಯಾಯಾಲಯದ ಮುಂದೆ 1 ನೇ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ .

5. ಸ್ಥಳದಲ್ಲಿ ವಶ ಪಡಿಸಿಕೊಂಡಿರುವ ವಸ್ತುಗಳನ್ನು ಮತ್ತು ದಸ್ತಗಿರಿ ಮಾಡಿದ 1 ನೆ ಆರೋಪಿಯನ್ನು ಮಾನ್ಯ ವಲಯ ಅರಣ್ಯಾಧಿಕಾರಿ ಮಾಸ್ತಿಕಟ್ಟಾರವರ ಸಮಕ್ಷಮ ಹಾಜರ ಪಡಿಸಿರುತ್ತೇನೆ . ನಂತರ ನಾನು ಕರ್ನಾಟಕ ಅರಣ್ಯ ಕಾಯ್ದೆ 1963 ಕಲಂ 24 ಮತ್ತು ವನ್ಯ ಜೀವಿ ಸಂರಕ್ಷಣಾ ಕಾಯ್ದೆ 1972 ಕಲಂ 2(16),9 , 39,51(ಸಿ) ಹಾಗೂ 55 (ಶೆಡ್ಯೂಲ - 3) ಇವುಗಳ ಅಡಿಯಲ್ಲಿ ವನ್ಯ ಜೀವಿ ಪ್ರಕರಣ ದಾಖಲಿಸಿ ಹಿರಿಯ ಅಧಿಕಾರಿಗಳ ಆದೇಶದಂತೆ ಮಾನ್ಯ ಹಿರಿಯ ಸಿವಿಲ್ ಜಡ್ಜ ಅಂಕೋಲಾ ರವರಿಗೆ ಪಿರ್ಯಾದಿ ಸಲ್ಲಿಸಿ 1 ನೆ ಆರೋಪಿಯನ್ನು ಹಾಜರ ಪಡಿಸಿರುತ್ತೇನೆ . ಮುಂದುವರೆದು ಅದೇ ದಿನ ರಾತ್ರಿ ಆರೋಪಿ ಕಡೆಯಿಂದ ವಶಪಡಿಸಿಕೊಂಡ ಸ್ವತ್ತುಗಳ ಬಗ್ಗೆ ಮಾನ್ಯ ಹಿರಿಯ ನ್ಯಾಯಾಲಯ ಅಂಕೋಲಾ ಕಡೆಯಿಂದ ಆದೇಶ ಪಡೆದು ಅದನ್ನು ಪಂಚರ ಸಮಕ್ಷಮ ಅಂಕೋಲಾ ತಾಲೂಕಿನ ಹೊಸಗದ್ದೆ ಗ್ರಾಮದ ಅರಣ್ಯ ಸಿಬ್ಬಂದಿಗಳ ವಸತಿ ಗೃಹ ಅವರಣದಲ್ಲಿ ಅದನ್ನು ಪಂಚರ ಸಮಕ್ಷಮ ಸುಟ್ಟು ಸ್ಥಳದಲ್ಲಿ ಪಂಚನಾಮೆ ಜರುಗಿಸಿ ಪೊಟೊ ತೆಗೆಯಲಾಯಿತು. ಸಾಕ್ಷಿಗೆ ಸದ್ರಿ ಪಂಚನಾಮೆ ತೋರಿಸಲಾಗಿದ್ದು ಸಾಕ್ಷಿ ಅದನ್ನು ನೋಡಿ ಗುರುತಿಸಿರುವುದರಿಂದ ನಿಪಿ-6 ಸಾಕ್ಷಿ ಸಹಿಯನ್ನು ನಿಪಿ-6 (ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಅದೇ

ಸಮಯದಲ್ಲಿ ತೆಗೆಯಲಾದ 2 ಪೊಟೊಗಳನ್ನು ತೋರಿಸಲಾಗಿದ್ದು ಸಾಕ್ಷಿ ಅದನ್ನು ನೋಡಿ ಗುರುತಿಸಿರುವುರಿಂದ ನಿಪಿ–7 ಮತ್ತು 8 ಎಂದು ಗುರುತಿಸಲಾಯಿತು . ಸಾಕ್ಷಿಯು ನಿಪಿ–3 ಮತ್ತು 4 ರ ಪೊಟೊದಲ್ಲಿರುವ ಪರಿಕರಣಗಳನ್ನು ನಿಪಿ–7 ಮತ್ತು 8 ರ ಪ್ರಕರಣದಲ್ಲಿ ಕಾಣಿಸಿದಂತೆ ಸುಡಲಾಗಿರುತ್ತದೆ.

( ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು .)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.